(SRI B. HUTCHE GOWDA.)

(*c*) how many tenders were rejected by the competent officer;

(*d*) whether the belated tender without the deposit money was accepted by the superior officer: who is this contractor;

(*e*) whether it is not advisable to call for new tenders in which case Government could have gained by it?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Two. Only one was in time and accompanied by the required earnest deposit.

(*c*) One.

(*d*) Yes; Sri Mari Gowda.

(*e*) This is a matter of opinion. The matter is however under consideration.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ಟೆಂಡರುಗಳು ಬಂದಿವೆ? ಎಷ್ಟೆಷ್ಟು ಹಣಕ್ಕೆ ಬಂದಿವೆ? ಅದರಲ್ಲಿ ಯಾವುದು ಜಾಸ್ತಿ ಮೊಬಲಗಿಗೆ ಬಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಮರಿಗೌಡ ಎಂಬವರಿಂದ 19,472 ರೂಪಾಯಿಗಳಿಗೆ, ಮೆನರ್ಸ್ ಶ್ರೀನಿವಾಸ್ ಅಂಡ್ ಕೋ ರವರಿಂದ 23,111 ರೂಪಾಯಿಗಳಿಗೆ—ಹೀಗೆ ಎರಡು ಬಂದಿವೆ.

Sri B. HUTCHE GOWDA.—Was it in time, Sir?

Sri Kadidal MANJAPPA.—Few minutes late. 7 ನಿಮಿಷಗಳೆಂದು ಕಾಣುತ್ತದೆ.

Sri B. HUTCHE GOWDA.—Was it accompanied by deposit amount?

ಶ್ರೀ ಕಡಿದಾಳ್ ಮಂಜಪ್ಪ.—ಅದು ಠೇವಣಿ ಮೊಬಲಗಿನೊಡನೆ ನಲ್ಲಿಸಲ್ಪಡಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಕಾಲ ಮೀರಿ ಠೇವಣಿ ಮೊಬಲಗಿಲ್ಲದೆ ಬಂದಿರುವುದನ್ನು ಸ್ವೀಕರಿಸಬಹುದೆ?

ಶ್ರೀ ಕಡಿದಾಳ್ ಮಂಜಪ್ಪ.—ಠೇವಣಿ ಮೊಬಲಗನ್ನು ಡಿಪಾಜಿಟ್‌ಮಾಡುವುದಕ್ಕೆ ಖಜಾನೆ ಮುಚ್ಚಲ್ಪಟ್ಟಿತ್ತು. ಅನಂತರ ಮಾಡುತ್ತೇವೆಂದು ಹೇಳಿದ ಮೇರೆ ಟೆಂಡರನ್ನು ಒಪ್ಪಿದ್ದಾರೆ. ಅದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಶ್ರೀ ಬಿ. ಹುಚ್ಚೇಗೌಡ.—ಇನ್ನೂ ಆ ವಿಚಾರದಲ್ಲಿ ತೀರ್ಮಾನವಾಗಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅದನ್ನು ಕಾನೂನಿನಗನುಸಾರವಾಗಿ ತೀರ್ಮಾನ ಮಾಡುತ್ತೀರಾ? ಹೊಸದಾಗಿ ಟೆಂಡರನ್ನು ಇಂಥ ಸಂದರ್ಭದಲ್ಲಿ ಕರೆಯಬೇಕೆಂದು ನಿಯಮವಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಲಾಭದಾಯಕವಾಗಿಯೂ ಮತ್ತು ಕಾನೂನಿಗೆ ವಿರುದ್ಧವಾಗಿಲ್ಲದೆಯೂ ಇದ್ದರೆ lowest ಟೆಂಡರನ್ನು ಒಪ್ಪಬಹುದು.

ಶ್ರೀ ಬಿ. ಹುಚ್ಚೇಗೌಡ.—ಈಗ ಠೇವಣಿ ಮೊಬಲಗು ಸರಕಾರದಲ್ಲಿ ಬಂದಿಲ್ಲದಿರುವುದರಿಂದ ಬೇರೆಯವರು ಟೆಂಡರು ಕೊಟ್ಟರೆ ತೆಗೆದುಕೊಳ್ಳುತ್ತೀರಾ?

Sri Kadidal MANJAPPA.—The whole question is under consideration.

ಶ್ರೀ ಜಿ. ನಾರಾಯಣಗೌಡ.—ನಾಲ್ಕು ಸಾವಿರದ ರೂಪಾಯಿಗಳಷ್ಟು ಕಡಮೆ ಮೊಬಲಗಿಗೆ ಟೆಂಡರು ಬಂತೆಂದು ತಾನೆ ಅದನ್ನು ಸ್ವೀಕರಿಸಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಜಿ. ನಾರಾಯಣಗೌಡ.—ಹೀಗೆ ಸ್ವೀಕಾರ ಮಾಡಿದರೆ ಸರ್ಕಾರಕ್ಕೆ ಉಳಿತಾಯವಲ್ಲವೆ?

Sri Kadidal MANJAPPA.—Quite evident.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಪುನಃ ಟೆಂಡರನ್ನು ಕರೆದರೆ ಇನ್ನೂ ಕಡಮೆ ಮೊಬಲಗಿಗೆ ಬರುವ ಸಂಭವವಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ.

Tour of Ministers.

Q.—760. **Sri B. RACHAIAH** (Yelandur—Scheduled Castes).—

Will the Government be pleased to state:—

(*a*) the total length toured by each Minister during 1952-53 and 1953-54, both outside and inside the State;

(*b*) the number of addresses received by each Minister during the said period;

(*c*) the number and nature of promises made by each Minister in their tour;

(*d*) whether they have kept their tour notes;

(*e*) how many Ministers have toured in Chamarajanagar, Yelandur and T.-Narsipur taluks and the number of promises made by them?

A.—**Sri K. HANUMANTHAIYA** (Chief Minister).—

(*a*)—

		1952-53.	*1953-54.*
Chief Minister	Outside	254 Miles (excludes journeys made by Air and Rail).	... 1281 Miles
	Inside	7469 Miles	... 7107 Miles
Minister for Law and Education.	Outside	248 Miles	... Journeys made by Air and by Rail (distance not readily available).
	Inside	10,044 Miles	... 8482 Miles (end of January 1954).
Minister for L. S. G. and Public Health.	Outside	(Journeys performed by Air and Train, total distance not readily available).	...
	Inside	8796 Miles	... 7081 Miles (end of February 1954).
Minister for Revenue and Public Works.	Outside	3568 Miles	... 9248 Miles
	Inside	8631 Miles	... 6829 Miles (end of January 1954).
Minister for Home and Industries.	Outside	150 Miles (Journeys performed by air and train are excluded as also journeys in the Continent).	... 156 Miles
	Inside	5987 Miles	... 4932 Miles
Minister for Agriculture.	Outside	...	...
	Inside	...	... 5350 Miles (end of February 1954).

(*b*) No detailed accounts are kept.

(*c*) Does not arise in view of the reply furnished to clause (*b*).

(*d*) Yes.

(*e*) 5 Ministers in T.-Narsipur.
4 Ministers in Chamarajanagar.
2 Ministers in Yelandur.

Does not arise in view of the reply furnished to clause (*c*).

ಶ್ರೀ ಬಿ. ರಾಚಯ್ಯ.—ಮಾನಪತ್ರಗಳಾವುವನ್ನು ಮಂತ್ರಿಗಳಿಗೆ ಒಪ್ಪಿಸುತ್ತಾರೋ ಅವುಗಳ ಪಟ್ಟಿ ಮಂತ್ರಿಗಳ ಹತ್ತಿರ ಇರುತ್ತದೆಯೆ?

ಶ್ರೀ ಕೆ. ಹನುಮಂತಯ್ಯ.—ಇರುತ್ತದೆ.

ಶ್ರೀ ಬಿ. ರಾಚಯ್ಯ.—ಸಾಮಾನ್ಯವಾಗಿ ಮಾನಪತ್ರಗಳಲ್ಲಿ ಆಯಾ ಸ್ಥಳದ ಕುಂದುಕೊರತೆಗಳನ್ನು ಮಾತ್ರ ನಿವೇದಿಸಿಕೊಂಡಿರುತ್ತಾರಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಹೌದು.

ಶ್ರೀ ಬಿ. ರಾಚಯ್ಯ.—ಅವುಗಳನ್ನು ಒಪ್ಪಿಸಿದಾಗ ತಾವು ವಾಗ್ದಾನ ಮಾಡಿದಮೇಲೆ ಪೀರಿಯಾಡಿಕಲ್ ವರದಿ ತರಿಸುತ್ತಿದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಸ್ಥಳೀಯ ಅಧಿಕಾರಿಗಳು tour notes ಮೇಲೆ ಪ್ರೊಗ್ರೆಸ್ ರಿಪೋರ್ಟ್ ಎಂದು ಕಳುಹಿಸುತ್ತಾರೆ.

ಶ್ರೀ ಬಿ. ರಾಚಯ್ಯ.—ಅದು ವರ್ಷಕ್ಕೊಂದುಸಲ ಬರುತ್ತದೆಯೋ ಅಥವಾ ಕ್ವಾರ್ಟರ್ಲಿ ಬರುತ್ತದೆಯೋ?

ಶ್ರೀ ಕೆ. ಹನುಮಂತಯ್ಯ.—ಆಗ್ಗಾಗ್ಗೆ ಬರುತ್ತದೆ.

ಶ್ರೀ ಬಿ. ರಾಚಯ್ಯ.—ಪೀರಿಯಾಡಿಕಲ್ ಅಂದರೆ ಹೇಗೆ ಬರುತ್ತದೆ?

ಶ್ರೀ ಕೆ. ಹನುಮಂತಯ್ಯ.—ಒಂದುಸಾರಿ ನಾವು ಟೂರ್ ಹೋದರೆ ಅಲ್ಲಿ ಏನು ವಿಷಯ ಜನರು ಪ್ರಸ್ತಾಪ ಮಾಡುತ್ತಾರೆ, ಅದರ ವಿಚಾರದಲ್ಲಿ ನಾವು ಏನು ಹೇಳಿರುತ್ತೇವೆ, ಯಾವುದನ್ನು ಮಾಡುವುದಕ್ಕೆ ಸಾಧ್ಯ, ಯಾವುದು ಸಾಧ್ಯವಿಲ್ಲ ಎಂಬ ಬಗ್ಗೆ ಅಧಿಕಾರಿಗಳು ಟೂರ್ ನೋಟ್ಸ್ ಕಳುಹಿಸುತ್ತಾರೆ.

ಶ್ರೀ ಬಿ. ರಾಚಯ್ಯ.—ಈ ವಿಚಾರದಲ್ಲಿ ಸರ್ಕಾರದಲ್ಲಿ ಮಂತ್ರಿಗಳು ಪ್ರತ್ಯೇಕವಾದ ಪಟ್ಟಿ ಅಥವಾ ರಿಜಿಸ್ಟರನ್ನಿಟ್ಟಿಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಪ್ರತ್ಯೇಕವಾದ ರಿಜಿಸ್ಟರನ್ನು ಪ್ರತಿಯೊಬ್ಬ ಮಂತ್ರಿಗಳೂ ಇಟ್ಟಿಲ್ಲ.

ಶ್ರೀ ಬಿ. ರಾಚಯ್ಯ.—ಟೂರ್ ಹೋದಾಗ ಕಂಡಂಥ ಮತ್ತು ಕೇಳಿದಂಥ ಕೆಲವು ಕುಂದುಕೊರತೆಗಳನ್ನು ಗುರುತುಮಾಡಲು ಒಂದು ರಿಜಿಸ್ಟರನ್ನಿಡುವುದು ಅಗತ್ಯವಲ್ಲವೆ?

ಶ್ರೀ ಕೆ. ಹನುಮಂತಯ್ಯ.—ಅದನ್ನು ಯೋಚನೆ ಮಾಡೋಣ. ಹಾಗೆ ಮಾಡಬೇಕಾದರೆ ಅದೇ ಒಂದು ದೊಡ್ಡ ಕೆಲಸವಾಗುತ್ತದೆ. ಅದಕ್ಕೆ ಸಿಬ್ಬಂದಿ ಬೇಕಾಗುತ್ತದೆ. ಒಂದುಸಾರಿ ಒಂದು ಜಿಲ್ಲೆಗೆ ಹೋದರೆ ನುಮಾರು ಸಾವಿರ ಅಥವಾ 500 ಅರ್ಜಿಗಳು ಬರುತ್ತವೆ. ಸಾಮಾನ್ಯವಾಗಿ ಸ್ಥಳದಲ್ಲಿರುವ ಅಧಿಕಾರಿಗಳಿಗೆ ಅಂಥ ವಿಚಾರದಲ್ಲಿ ನೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇವೆ.

ಶ್ರೀ ಬಿ. ರಾಚಯ್ಯ.—ಹಾಗೆ ಮಾಡಿದಮೇಲೆ ತಾವು ಕೊಟ್ಟ ಭರವಸೆಯಂತೆ ಕೆಲಸಕಾರ್ಯ ನಡೆದಿದೆಯೆ ಅಥವಾ ಇಲ್ಲವೆ ಎಂಬುದನ್ನು ಪೆಷರ್ ಮಾಡುವುದು ಹೇಗೆ?

ಶ್ರೀ ಕೆ. ಹನುಮಂತಯ್ಯ.—ಅದಕ್ಕೆ ಟೂರ್ ನೋಟ್ಸ್ ಬರುತ್ತದೆ. ಆದರ ಮೇಲೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಹೇಳಿದಮೇಲೆ ಬೀಸೋ ದೊಣ್ಣೆಗೆ ತಪ್ಪಿಸಿಕೊಂಡ ಹಾಗೆ ಮುರೆತುಬಿದ್ದುತ್ತೀರಿ.

Mr. SPEAKER.—Please put the question in a proper and relevant way.

ಶ್ರೀ ಬಿ. ರಾಚಯ್ಯ.—ಟೂರ್ ಮಾಡುವುದು ಸಮಾರಂಭಗಳಲ್ಲಿ ಭಾಗವಹಿಸುವುದಕ್ಕೇ ಅಥವಾ ಕೆಲಸಕಾರ್ಯವನ್ನೇನಾದರೂ ಮಾಡಬೇಕೆಂಬ ಉದ್ದೇಶವಿದೆಯೆ?

ಶ್ರೀ ಕೆ. ಹನುಮಂತಯ್ಯ.—ಬರೀ ಸಮಾರಂಭಕ್ಕಾಗಿ ಹೋಗುವುದಿಲ್ಲ. ಸಮಾರಂಭಕ್ಕೆ ಹೋದರೂ ಅದರ ಜೊತೆಯಲ್ಲಿ ಬೇಕಾದಷ್ಟು ಕೆಲಸವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ಮತ್ತು ಎಳಂದೂರು ತಾಲ್ಲೂಕುಗಳಲ್ಲಿ ಟೂರ್ ಮಾಡಿರುವ ಮಂತ್ರಿಗಳು ಯಾರು ಯಾರು?

ಶ್ರೀ ಕೆ. ಹನುಮಂತಯ್ಯ.— ಅವರಲ್ಲಿ ನಾನೂ ಒಬ್ಬ. ಎಳಂದೂರಿಗೆ ಒಂದು ಸ್ಪೆಷಲ್ ನರ್ಸ್-ಡಿವಿಜ್ ಆಫೀಸನ್ನು ಸ್ಥಾಪಿಸಿ 5½ ಲಕ್ಷ ರೂಪಾಯಿಗಳನ್ನು ಕೆರೆಯ ಜೀರ್ಣೋದ್ಧಾರಕ್ಕಾಗಿ ಕೊಟ್ಟಿದೆ.

Mr. SPEAKER.—There was consultation with the colleagues on the spot and the question was disposed of; you must thank them.

ಶ್ರೀ ಬಿ. ರಾಚಯ್ಯ.—ಅಲ್ಲಿ ಕ್ಷಾಮ ಪರಿಸ್ಥಿತಿಯಿದ್ದ ಕಾಲದಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳು ಮತ್ತು ಗೃಹ ಸಚಿವರು ಅಲ್ಲಿಗೆ ಫ್ಲೈಯಿಂಗ್ ವಿಸಿಟ್ ಕೊಟ್ಟಿದ್ದರೆ?

ಶ್ರೀ ಕೆ. ಹನುಮಂತಯ್ಯ.—ಟೂರ್ ಮಾಡಿದ್ದೇವೆ.

ಶ್ರೀ ಬಿ. ರಾಚಯ್ಯ.—ಆ ಸಂದರ್ಭದಲ್ಲಿ ಚಾಮರಾಜನಗರ, ದೊಡ್ಡರಾಜಪೇಟೆ, ಆಲೂರು ಈ ಪ್ರಾಂತದ ಜನರಿಗೆ ಸೇತುವೆಯಾಗಬೇಕು, ಎರಡುಕಡೆ ಸಂಚಾರಕ್ಕೆ ಅನುಕೂಲವಿಲ್ಲ ಎಂದು ತಿಳಿಸಿದ್ದರೆ?

ಶ್ರೀ ಕೆ. ಹನುಮಂತಯ್ಯ.—ಇರಬಹುದು. ಅವುಗಳನ್ನೆಲ್ಲಾ ಮಾಡುವುದಕ್ಕೆ ಹಣಬೇಕು, ಹಣವಿದ್ದರೆ ಬೇಕಾದಷ್ಟು ಕೆಲಸ ಮಾಡಬಹುದು.

ಶ್ರೀ ಬಿ. ರಾಚಯ್ಯ.—ಹಿಂದೆ ರೆವೆನ್ಯೂ ಮಂತ್ರಿಗಳಾಗಿದ್ದಾಗ ಈಗ ಈ ಸಭೆಯ ಮಾನ್ಯ ಅಧ್ಯಕ್ಷರಾಗಿರುವ ಶ್ರೀ ಎಚ್. ಸಿದ್ಧಯ್ಯನವರು ಈ ವಿಚಾರದಲ್ಲಿ ಭರವಸೆ ಕೊಟ್ಟಿದ್ದರಲ್ಲವೆ?

ಅಧ್ಯಕ್ಷರು.—ಇದೊಂದು ಸೇತುವೆ ಮಾಡಿದರೆ ಮುಂದೆ ಅವರು ಕೇಳುವುದಿಲ್ಲ.

Sri A. BHEEMAPPA NAIK.—Will it not be better to maintain some register showing the promises held out by the Ministers at Government level? Whatever promises are held out or made for consideration at Government level, would it not be better to maintain some register showing all these promises so that they might be fulfilled?

Sri Kadidal MANJAPPA.—I will consider that suggestion.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು tour ಹೋಗತಕ್ಕ ಕಾಲದಲ್ಲಿ note ಮಾಡಿಕೊಳ್ಳುವ ಅಂಶಗಳನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸುವುದು ಪದ್ಧತಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಮಯದಲ್ಲಿ ಅರ್ಜಿಗಳ ಮೇಲೆಯೇ ಕಾರ್ಯಕ್ರಮ ಕೈಗೊಳ್ಳುವುದನ್ನು ತಿಳಿಸಿರುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಅಹವಾಲುಗಳ ಪಟ್ಟಿಯೊಂದನ್ನು ಮಾಡಿ ಏನು ಕೆಲಸ ನಡೆದಿದೆ, ಏನು ಸಾಧ್ಯ ಎಂಬುದನ್ನು ತಿಳಿದುಕೊಳ್ಳಲು ಸಂಬಂಧಪಟ್ಟ ಇಲಾಖೆಗೆ ಕಳುಹಿಸಲಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.— ತಾವು ಕೆಲವು ಸಂದರ್ಭಗಳಲ್ಲಿ ತಿಳಿವಳಿಕೆ ಕೊಟ್ಟಿರುತ್ತೀರಿ, ಇನ್ನೂ ಕೆಲವು ಸಂದರ್ಭಗಳಲ್ಲಿ ಭರವಸೆ ಕೊಟ್ಟಿರುತ್ತೀರಿ. ಇವುಗಳನ್ನೆಲ್ಲಾ ಸಂಬಂಧಪಟ್ಟ ಇಲಾಖೆಯವರು note ಮಾಡಿಕೊಂಡು ಅವುಗಳನ್ನು ಅನಂತರ confirm ಮಾಡಿಸಿಕೊಳ್ಳುವುದು ಪದ್ಧತಿಯೇ ಅಥವಾ ತಾವು ಹೇಳಿದ ಮಾತ್ರಕ್ಕೇ ಅದನ್ನು ಕಾರ್ಯರೂಪಕ್ಕೆ ತರುವುದು ಪದ್ಧತಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು ಅವುಗಳನ್ನು confirm ಮಾಡಿಸಿಕೊಳ್ಳುತ್ತಾರೆ. ಕೆಲವು ಸಂದರ್ಭಗಳಲ್ಲಿ ನಾವೇ ಜ್ಞಾಪಿಸಿಕೊಂಡು ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಂತ್ರಿಗಳು ಕೊಟ್ಟ ಭರವಸೆಗೆ ಅಧಿಕಾರಿಗಳು ಯಾರಾದರೂ ವ್ಯತಿರಿಕ್ತವಾಗಿ ನಡೆದಿರುವ ಸಂದರ್ಭಗಳು ಮಾನ್ಯ ಸದಸ್ಯರ ಮೂಲಕ ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಜ್ಞಾಪಕವಿಲ್ಲ.

ಶ್ರೀ ಆರ್. ಅನಂತರಾಮ್.—ವ್ಯವಸಾಯ ಮಂತ್ರಿಗಳು 1952-53 ವರ್ಷ, 1953-54ರಲ್ಲಿ ಸಂಸ್ಥಾನದ ಹೊರಗಡೆ ಒಂದು ಮೈಲಿ ಸಹ tour ಮಾಡಿಲ್ಲವೆಂದು ಹೇಳಿರುವುದು ಸರಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರವನ್ನೊದಗಿಸಿದೆ.

ಶ್ರೀ ಆರ್. ಅನಂತರಾಮ್.—ಮುಖ್ಯ ಮಂತ್ರಿಗಳು ಸಂಸ್ಥಾನದ ಹೊರಗೆ 1952-53ರಲ್ಲಿ 254 ಮೈಲಿಗಳಷ್ಟು ಸಂಚಾರಮಾಡಿರುವುದಾಗಿಯೂ, ಇದರಲ್ಲಿ Journeys made by Air and Rail ಸೇರಿಲ್ಲವೆಂದೂ ತಿಳಿಸಿದ್ದೀರಿ. ಹಾಗಾದರೆ By Air ಎಲ್ಲಗಾದರೂ ಹೋಗಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—By Air ಹೋಗಿರುತ್ತಾರೆ. ಆದರೆ ಎಷ್ಟು ಮೈಲಿ ಎಂಬ ಬಗ್ಗೆ ವಿವರ ಸಿದ್ಧವಾಗಿಲ್ಲ.

Sri M. LINGANNA.—Is it not a fact that although many interpellations were put in regard to the promises made by the Ministers during their tours, they have not been implemented?

Sri Kadidal MANJAPPA.—If the Hon'ble Member brings to the notice of the Ministers any definite promises made by them which they have not

implemented, we will examine them and try to implement them.

Sri M. LINGANNA.—Is it not a fact that some of the interpellations put are on the promises made by the Ministers during their tours ?

Sri Kadidal MANJAPPA.—May be in some cases.

Sri M. LINGANNA.—Has it come to the notice of the Government that as tour notes have not been kept at Government level, some departmental officers are finding it difficult to answer interpellations ?

Sri Kadidal MANJAPPA.—May be in some cases.

Sri Ijari SIRASAPPA.—Is it not possible to have assurance committees of the Legislature to go into the details of the promises made in the Legislature ?

Sri Kadidal MANJAPPA.—It is a matter of opinion. I cannot say anything.

Tigalar Colony at Tumkur. (Land acquisition.)

Q.—794. **Sri MUDDURAMIAH** (Koratagere-Madhugiri).—

Will the Government be pleased to state :—

(*a*) how long since it was resolved by the Municipal Council of Tumkur to acquire lands for the formation of a colony for Tigalars ;

(*b*) the action taken by Government so far ?

A.—**Sri Kadidal MANJAPPA** (Minister for Revenue and Public Works) [On behalf of SRI T. CHANNIAH (Minister for Public Health and Local Self-Government)].—

(*a*) Three years and 8 months.

(*b*) The disposal of the land in Survey No. 270 which the Town Municipal Council wanted was the subject matter of petitions and counter-petitions which were pending before Government. It was finally decided that as the land in this survey number had been granted to Sri Sattar Beig for cultivation, it will not be available to the Municipality for the Town Extension. The Town Municipal Council has again resolved to aquire the land from the grantee under aquisition proceedings and also to get the undisposed portion by alienation. The matter is under examination.

ಶ್ರೀ ಮುದ್ದುರಾಮಯ್ಯ.—ತುಮಕೂರಿನ ಬಹು ಮಂದಿ ತಿಗಳರು ತೋಟಗಳಲ್ಲಿ ವಾಸಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಶಃ ಇನ್ನೆರ್ಲಾದರೂ ವಾಸವಾಗಿದ್ದರೆ ಅವರ ಕೆಲಸಕ್ಕೆ ತೊಂದರೆಯಾಗುತ್ತದೆಂದು ಹಾಗೆ ವಾಸವಾಗಿರಬಹುದು.

ಶ್ರೀ ಮುದ್ದುರಾಮಯ್ಯ.—ಇವರು ಅಲ್ಲಿಂದ ತಮ್ಮ ಕೆಲಸಕಾರ್ಯಗಳಿಗೆ ಹೋಗಬೇಕಾದರೆ ಬಹಳ ದೂರ ಹೋಗಬೇಕಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಬಿ. ಸಿ. ನಂಜುಂಡಯ್ಯ.—(*a*) ಪ್ರಶ್ನೆಗೆ ಉತ್ತರವಾಗಿ ತಿಗಳರ ಕಾಲೊನಿಗಾಗಿ ತುಮಕೂರು ಮುನಿಸಿಪಲ್ ಕೌನ್ಸಿಲ್‌ನವರು land acquire ಮಾಡಿಕೊಳ್ಳುವ ಬಗ್ಗೆ ನಿರ್ಣಯಿಸಿ ಮೂರು ವರ್ಷ ಎಂಟು ತಿಂಗಳಾಯಿತೆಂದು ತಿಳಿಸಿದ್ದೀರಿ. ಇದರಲ್ಲಿ ಎರಡು portions ಇವೆ. ಒಂದು portion ಬಗ್ಗೆ ತಕರಾರು ಇರಬಹುದು, ಇನ್ನೊಂದು portion ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

Sri Kadidal MANJAPPA.—Perhaps the whole question is under examination.

ಶ್ರೀ ಬಿ. ಸಿ. ನಂಜುಂಡಯ್ಯ.—ಈಗಾಗಲೇ ಮೂರು ವರ್ಷ ಎಂಟು ತಿಂಗಳು ಆಯಿತು ; ಇನ್ನೂ examine ಮಾಡುತ್ತಿದ್ದೇವೆ ಎಂದರೆ ಎಷ್ಟು ದಿನ ಆಗುತ್ತದೆ, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಮಾಡುತ್ತೇವೆ.

Community Projects (Expenditure).

Q.—908. **Sri T. G. THIMME GOWDA** (Tiptur).—

Will the Government be pleased to state :—

the amount spent during 1953-54 up-to-date for the Community Projects in the State and the nature of work done ?

A.—**Sri Kadidal MANJAPPA** (Minister for Revenue and Public Works) [On behalf of DR. R. NAGAN GOWDA (Minister for Agriculture)].—

The amount spent up to the end of 13th March 1954 : Rs. 3,01,714.